ದಿಃ 18-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು **: 1** ನೇ ಪ್ರತಿವಾದಿಯ ಪರ ಶ್ರೀ. ವಿ.ಜಿ.ಎನ್ ವಕೀಲರಿಂದಃ</u>

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ತಂದೆಯ ಆಸ್ತಿಗಾಗಿ ಈ ದಾವೆ ಹೂಡಿದ್ದೇನೆ. ಭಾಗ ಕೋರಿರುವ ಅಂಶಗಳನ್ನು ವಾದ ಪತ್ರದಲ್ಲಿ ಬರೆಯಲಾಗಿದೆ. ನಿಪಿ-1 ಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸಂಜೀವಯ್ಯ ಮತ್ತು ಪಾಪಮ್ಮ ನನ್ನ ಅಜ್ಜ ಮತ್ತು ಅಜ್ಜಿ. ನನ್ನ ತಾತನ ಮೊದಲನೇ ಮಗಳಾದ ಹನುಮಕ್ಕನಿಗೆ 4 ಜನ ಮಕ್ಕಳು. ಸದರಿ ಹನುಮಕ್ಕನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಾತನ ಮಗನಾದ ಹನುಮಯ್ಯ ರವರು ದಾವೆ ಹೂಡುವ ಕಾಲಕ್ಕೆ ಮರಣ ಹೊಂದಿದ್ದು ಅವರಿಗೆ 1 ನೇ ಪ್ರತಿವಾದಿ ಹೆಂಡತಿ ಎಂದರೆ ಸರಿ. 1 ನೇ ಪ್ರತಿವಾದಿಗೆ ಒಟ್ಟು 6 ಜನ ಮಕ್ಕಳು ಎಂದರೆ ಸರಿ. ಸದರಿ 6 ಜನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು